***ಓ.ಎಸ್.ನಂ.394/2017***

***ಪಿ.ಡಬ್ಲ್ಯೂ-1.***

***ದಿಃ 10-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯವಿಚಾರಣೆ ಃ ವಾದಿ ಪರ ವಕೀಲರಿಂದ.***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈಗಾಗಲೇ ನ್ಯಾಯಾಲಯಕ್ಕೆ ದಿಃ*28-03-1973* ರ ನೊಂದಣಿ ಕ್ರಯ ಪತ್ರದ ಧೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*1* ಎಂದು, ದಾವಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಪಹಣಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*2* ಎಂದು,ಪ್ರತಿವಾದಿ ಸಂಬಂಧಿಸಿದ ಸ್ವತ್ತಿನ ಕುರಿತು ಪಹಣಿ ಹಾಜರುಪಡಿಸಿದ್ದು ನಿ.ಪಿ-*3* ಎಂದು, ಉಪವಿಭಾಗಧಿಕಾರಿಗಳ ನ್ಯಾಯಾಲಯ ತರೀಕೆರೆ ರವರು ದಿಃ*15-09-1998* ರಂದು ಆದೇಶಿಸಿರುವ ಆದೇಶದ ಪ್ರತಿ ಹಾಜರುಪಡಿಸಿದ್ದು ನಿ.ಪಿ-*4* ಎಂದು, ದಿಃ*10-03-1999* ರಂದು ಜಿಲ್ಲಾಧಿಕಾರಿ ತರೀಕೆರೆರವರು ನೀಡಿರುವ ಹಿಂಬರಹ ಹಾಜರುಪಡಿಸಿದ್ದು ನಿ.ಪಿ-*5* ಎಂದು, ದಾವಾ ಸ್ವತ್ತಿನ ಕುರಿತು ಅಳತೆ ಮಾಡುವ ಬಗ್ಗೆ ನೀಡಿದ ಅರ್ಜಿ ಮತ್ತು ಅಳತೆ ಮಾಡಿದ ಧೃಢೀಕೃತ ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ-*6* ಮತ್ತು *7* ಎಂದು, ನಾನು ಪ್ರತಿವಾದಿಗೆ ನನ್ನ ವಕೀಲರ ಮೂಲಕ ಕಾನೂನು ತಿಳುವಳಿಕೆ ನೋಟೀಸು ನೀಡಿದ್ದು ಸದರಿ ನೋಟಿಸನ್ನು ನಿ.ಪಿ-*8* ಎಂದು, ಅಂಚೆ ಇಲಾಖೆಯವರು ನೀಡಿರುವ ಹಿಂಬರಹ ನಿ.ಪಿ-*8*(ಎ) ಎಂದು ಗುರುತಿಸಲಾಯಿತು.

ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

***ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು***
***ಪ್ರ.ದ.ನ್ಯಾ.ದಂ. ರವರು, ತರೀಕೆರೆ.***